# ಈ ಶತಮಾನದ ಮಾದರಿ ಹೆಣ್ಣು

## ಅಮೃತ ಉದಯದ 'ಕಸ್ತೂರಿನಿವಾಸ' ಮೃದಲಾ

◆ 'ಕಸ್ತೂರಿ ನಿವಾಸ' ಸಿನಿಮಾಕ್ಕೂ ಇದಕ್ಕೂ ಏನು ಸಂಬಂಧ ಇದೆ?

'ಕಸ್ತೂರಿನಿವಾಸ' ಸಿನಿಮಾಕ್ಕೂ ಧಾರಾವಾಹಿಗೂ ಸಂಬಂಧ ಇಲ್ಲ. ಹಾಗೆಂದು ಸಂಬಂಧ ಇಲ್ಲವೇ ಇಲ್ಲ ಎಂದೂ ಅಲ್ಲ. ಸಿನಿಮಾದಲ್ಲಿ 'ಈ ಶತಮಾನದ ಮಾದರಿ ಹೆಣ್ಣು' ಗೀತೆಯೊಂದು ಬರುತ್ತದೆ. ಅಲ್ಲಿ ಆರತಿ ಆಧುನಿಕ ಹೆಣ್ಣಿನ ತುಮುಲಗಳನ್ನು ತಮ್ಮ ಪಾತ್ರದಲ್ಲಿ ಪ್ರತಿನಿಧಿಸಿದ್ದಾರೆ. ಆ ಹಾಡಿನ ಭಾವದ ಒಂದು ಸಾಲಿನ ಬಿಂಬಿದ ಮೇಲೆ ಕಥೆಯ ಹಂದರ ಅನಾವರಣವಾಗಿದೆ. ಆ ಹಿನ್ನೆಲೆಯಲ್ಲಿ ಒಂದು ಎಳೆಯನ್ನು ಕಾಣಬಹುದು. ಇದನ್ನು ಹೊರತುಪಡಿಸಿ ಯಾವುದೇ ಸಂಬಂಧ ಇಲ್ಲ.

◆ ಮೃದಲಾ ಹೇಗೆ ಮಾದರಿಯಾಗುತ್ತಾಳೆ?

ತೀರಾ ದಿಟ್ಟೆ, ತಪ್ಪು ಯಾರದ್ದೇ ಇದ್ದರೂ ನೇರವಾಗಿ ಖಂಡಿಸುವ ಹುಡುಗಿ. ಯಾವ ಅನ್ಯಾಯವನ್ನೂ ಸಹಿಸುವ ಮನೋಭಾವ ಈಕೆಯದಲ್ಲ. ಶಾಸ್ತ್ರ– ಸಂಪ್ರದಾಯಗಳಿಗೆ ವಿರೋಧ ಇಲ್ಲದಿದ್ದರೂ ಅದರ ಹಿಂದಿನ ಸತ್ಯವನ್ನು ಅರಿಯುವ ವೈಚಾರಿಕತೆಯನ್ನು ತೋರಿಸಿದ್ದಾಳೆ. ಈ ಕಾರಣಕ್ಕೆ ಪಾತ್ರ ಮಹಿಳಾ ಸಮುದಾಯಕ್ಕೆ ಹತ್ತಿರ ಆಗುತ್ತದೆ. ಸಿನಿಮಾದ ಹಾಡು ಇಂದಿಗೂ ಪ್ರಸ್ತುತ.



ಏಕೆಂದರೆ ಈ ಶತಮಾನದಲ್ಲೂ ಹೆಣ್ಣು ಹೀಗೆ ಇರಬೇಕು ಎನ್ನುವ ಒತ್ತಡ ಇದೆ. ಅಂತಹ ವಾತಾವರಣದಲ್ಲಿ ಮೃದಲಾ ಅಂಜದೆ ತನ್ನ ಅಭಿಪ್ರಾಯವನ್ನು ದಾಖಲಿಸುತ್ತಾಳೆ. ಈಕೆ ಚಿಕ್ಕವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡಿರುತ್ತಾಳೆ. ತಂದೆಯೇ ತಾಯಿಯೂ ಆಗಿ ಸಾಕಿರುತ್ತಾರೆ. ತನ್ನ ತಂದೆಯ ಆದರ್ಶವನ್ನು ಪಾಲಿಸಿಕೊಂಡು ಬೆಳೆದಿದ್ದಾಳೆ. ದೊಡ್ಡವಳಾಗುತ್ತಿದ್ದಂತೆ ತಂದೆ ಕೂಡ ಈಕೆಯನ್ನು ಅಗಲುತ್ತಾರೆ. ಒಬ್ಬಂಟಿಯಾದ ಈಕೆ ಸಮಾಜವನ್ನು ಧೈರ್ಯದಿಂದ ಎದುರಿಸುತ್ತಾಳೆ. ತನ್ನ ಬದುಕಿನ ಸಾರ್ಥಕತೆಯನ್ನು ಸಾಬೀತು ಮಾಡುತ್ತಾಳೆ. ಮದುವೆಯಾಗಿ ಗಂಡನ ಮನೆಗೆ ಬಂದಿದ್ದಾಳೆ. ಆ ಮನೆಯಲ್ಲಿ ಆಕೆಯ ಮಾತನ್ನು ಯಾರೂ ಕೇಳುವುದಿಲ್ಲ. ಗಂಡ ಸ್ವಲ್ಪ ಅರ್ಥ ಮಾಡಿಕೊಂಡರೂ ಅಸಹಾಯಕರು. ಆ ಮನೆಯ ಯಜಮಾನಿಯದೇ ಮಾತು ನಡೆಯಬೇಕು. ಅದನ್ನು ಮೀರಿ ತನ್ನ ತನವನ್ನು ಈಕೆ ಕಾಪಾಡಿಕೊಳ್ಳುತ್ತಾಳೆ. ಎಲ್ಲರಿಗೂ ಈ ಪಾತ್ರ ಏನನ್ನೋ ಹೇಳುವಂತಿದೆ.

◆ ವೈಚಾರಿಕವಾಗಿ ಮೃದಲಾ ನಿಲುವಿನ ಜೊತೆ ಅಮೃತಾ ಎದುರಾದರೆ ಹೇಗಿರುತ್ತದೆ?

ಮಹಿಳೆ ಮತ್ತು ಪುರುಷನ ನಡುವೆ ವ್ಯಕ್ತಿಯಾಗಿ ಯಾವ ಭಿನ್ನತೆಯೂ ಇಲ್ಲ. ಇಬ್ಬರಲ್ಲಿ ಇರುವ ವ್ಯತ್ಯಾಸ ಅಂಗದಲ್ಲಿ ಮಾತ್ರ. ಪುರುಷನಷ್ಟೇ ಶಕ್ತಿ ಸಾಮರ್ಥ್ಯ ಮಹಿಳೆಗೂ ಇದೆ ಎನ್ನುವ ನಿಲುವು ಆಕೆಗಿದೆ. ವೃತ್ತಿಯಿಂದ ಅವಳು ಇಂಟೀರಿಯರ್ ಡಿಸೈನರ್. ಅವಳ ತಂದೆ ವೈಚಾರಿಕ ಅರಿವು ನೀಡಿ ಬೆಳೆಸಿದ್ದಾರೆ. ಅವಳಿಗೂ ನೋವು–ನಲಿವು ಇದೆ. ತನ್ನ ನೋವಿಗೆ ಕಣ್ಣೀರು ಹಾಕಿದರೂ ಸಾರ್ವಜನಿಕವಾಗಿ ಆಕೆ ಎಲ್ಲೂ ಅದನ್ನು ತೋರಿಸಿಕೊಳ್ಳುವುದಿಲ್ಲ. ಹಾಗೆ ಕಾಣಿಸಿಕೊಂಡರೆ ತನ್ನ ಸಾಮರ್ಥ್ಯದ ಬಗ್ಗೆ ಅನುಮಾನ ಬರುತ್ತದೆ ಎನ್ನುವುದನ್ನು ಆಕೆ ಅರ್ಥಮಾಡಿಕೊಂಡಿದ್ದಾಳೆ. ಅಮೃತಾ ಕೂಡ ಸ್ಟ್ರಾಂಗ್ ಇದ್ದಾಳೆ. ಮಾನಸಿಕವಾಗಿ ಕರುಣಾಮಯಿ. ಬೇರೆಯವರ ಕಷ್ಟಗಳನ್ನು ಅರ್ಥ ಮಾಡಿಕೊಳ್ಳುತ್ತಾಳೆ. ಸ್ನೇಹಗುಣ ನನ್ನ ಸ್ನೇಹ ಸಂಪಾದಿಸುವುದು ಸುಲಭ. ನನಗೂ ಸಿಟ್ಟು ಬರುತ್ತದೆ. ಭಾವ ಅದನ್ನು ಹೊರಹಾಕಲು ಪ್ರಚೋದಿಸಿದರೂ, ಬುದ್ಧಿ ಅದನ್ನು ನಿಯಂತ್ರಿಸುತ್ತದೆ.

◆ ನಿಮ್ಮನ್ನು ಭೇಟಿಯಾದ ಒಬ್ಬ ವೀಕ್ಷಕ ಹಾಯ್... ನಿಮ್ಮ ಪರಿಚಯ ಹೇಳಿ ಎಂದು ಕೇಳಿದರೆ...

ಹಲೋ... ಎಂದು ಹೇಳುತ್ತೇನೆ. ಸಮಯ– ಅವಕಾಶ ಸಿಕ್ಕರೆ ನನ್ನನ್ನು ಪರಿಚಯ ಮಾಡಿಕೊಳ್ಳುತ್ತೇನೆ. ಹುಟ್ಟಿದ್ದು ಮಾತ್ರ ಕುಂದಾಪುರದಲ್ಲಿ. ಬೆಳೆದದ್ದಲ್ಲಾ ಬೆಂಗಳೂರಿನ್ನಲ್ಲೇ. ನನ್ನ ತಂದೆ– ತಾಯಿ ಕೂಡ ಇಲ್ಲೇ ಇದ್ದಾರೆ. ಬಿಎ ಜರ್ನಲಿಸಂ ಮಾಡಿದ ನಂತರ ಫ್ಯಾಷನ್ ಡಿಸೈನರಿಂಗ್ ಕೋರ್ಸ್ ಕೂಡ ಮಾಡಿದ್ದೇನೆ. ನಟನೆ ನನ್ನ ಮನದಾಳದ ಹಂಬಲವಾಗಿತ್ತು. ಸಮಯ ಟೀವಿ ವಾಹಿನಿಗೆ ಕೆಲಸಕ್ಕೆ ಸೇರಿದೆ. ನಂತರ ಬೇರೆ ಕೆಲಸ ಹೀಗೆ ಸುತ್ತಾಡುತ್ತಿದ್ದ ನನಗೆ ನಮ್ಮ ನೆರೆಮನೆಯವರೊಬ್ಬರು ಇಂದಿನ ಸ್ಟಾರ್‌ಸುವರ್ಣ ಟೀವಿಗೆ ಫೋಟೊ ಕಳುಹಿಸಲು ಹೇಳಿದರು. ನಾನು ಅಲ್ಲಿಗೆ ತೆರೆಯ ಹಿಂದೆ ಕೆಲಸ ಮಾಡಬೇಕಿತ್ತು. ಆದರೆ, 'ಸರಸ್ವತಿ'ಯಲ್ಲಿ ನಟಿಸುವ ಅವಕಾಶ ಸಿಕ್ಕಿತು. ಅದಾದ ನಂತರ ನಟನೆಯನ್ನೇ ಮುಂದುವರಿಸುತ್ತಿದ್ದೇನೆ. ಕಳೆದ ಎಂಟು ತಿಂಗಳ ಹಿಂದೆ ಮದುವೆಯಾಯ್ತು. ಖುಷಿಯಾಗಿ ಜೀವನ ನಡೆಯುತ್ತಿದೆ.

■ ರಾಘವೇಂದ್ರ ಕೆ.